ಓ.ಎಸ್‌ಃ 21/2019

ಪಿ.ಡಬ್ಲ್ಯೂಃ 01

**<u>ದಿನಾಂಕಃ 21-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಮುಂದುವರೆದ ಪಾಟೀ ಸವಾಲು 1 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ ಪಿ.ಎಂ.ವಿ ವಕೀಲರಿಂದಃ</u>**

**11.** ನಾನು ಹಾಜರುಪಡಿಸಿದ ಕಚ್ಚಾ ನಕಾಶೆಯಲ್ಲಿ ನನ್ನ ಮಾಲ್ಕಿ ಆಸ್ತಿಯನ್ನು ತೋರಿಸಿರುತ್ತೇನೆ. ನಕಾಶೆಯಲ್ಲಿ ಕ್ಷೇತ್ರ 38 ಮತ್ತು 69 ತೋರಿಸಿರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು 59 ಬದಾಲಾ 69 ಎಂದು ತಪ್ಪಾಗಿ ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಕಚ್ಚಾ ನಕಾಶೆಯಲ್ಲಿ JEIF ವಿಸ್ತೀರ್ಣವನ್ನು ನಮೂಸಿರುವುದಿಲ್ಲ. EFGH ವಿಸ್ತೀರ್ಣವನ್ನು ತೋರಿಸಿರುವುದಿಲ್ಲ. JEIF ನಲ್ಲಿ ಶೆಡ್ಡು ಇರುತ್ತದೆ ಎಂದರೆ ಸರಿ. ಸದರಿ ಶೆಡ್ಡು ವೀರಭದ್ರೇಶ್ವೇರ ದೇವಸ್ಥಾನಕ್ಕೆ ಸಂಬಂಧಪಟ್ಟ ಶೆಡ್ಡು ಎಂದರೆ ಸರಿಯಲ್ಲ. JEIF ನ ಬಾಡಿಗೆಯನ್ನು ರಾಚೋಟೇಶ್ವರ ದೇವಸ್ಥಾನದ ಕಮೀಟಿಯವರು ತಗೆದುಕೊಳ್ಳುತ್ತಾರೆ ಎಂದರೆ ಒತ್ತಾಯಪೂರ್ವಕವಾಗಿ ತಗೆದುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಬಾಡಿಗೆಯನ್ನು 1 ರಿಂದ 5 ನೇ ಪ್ರತಿವಾದಿಯರು ತಗೆದುಕೊಳ್ಳುತ್ತಾರೆ ಎಂದರೆ ಸರಿ. ನನ್ನ ಹಾತ್ ನಕಾಶೆಯಲ್ಲಿ ತೋರಿಸಿದ DCJI ನ ಬಾಡಿಯನ್ನು ನಾನೆ ತಗೆದುಕೊಳ್ಳುತ್ತೇನೆ.

12. ನನ್ನ ವಾದ ಪತ್ರದಲ್ಲಿ ಪ್ರತಿವಾದಿಯರು JEIF ಒತ್ತಾಯಪೂರ್ವಕವಾಗಿ ಬಾಡಿಗೆಯನ್ನು ತಗೆದುಕೊಳ್ಳುತ್ತಾರೆ ಎಂದು ಬರೆಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ JEIF ನು ಖುಲಾ ಜಾಗೆಯೆಂದು ಬರೆಸಿರುತ್ತೇನೆ. ಸಾಕ್ಷಿ ಮುಂದುವರೆದು EF ಗೋಡೆಯಂತೆ ಶಡ್ಡು ನಿರ್ಮಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸುವ 4-5 ವರ್ಷಗಳ ಮುಂಚೆ ಶಡ್ಡು ಇತ್ತು. ಸದರಿ ಶಡ್ಡು ತರೆವುಗೊಳಿಸಿರುವುದಿಲ್ಲ. ಪ್ರತಿವಾದಿಯರು ಶಡ್ಡು ತರೆವುಗೊಳಿಸುತ್ತಾರೆ ಎಂದು ದೂರನ್ನು ಸಲ್ಲಿಸಿರುವುದಿಲ್ಲ. ಪ್ರತಿವಾದಿಯರು ಶೆಡ್ಡಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಪಂಚಾಯಿತಿಗೆ ತಕರಾರನ್ನು ಸಲ್ಲಿಸಿರುವುದಿಲ್ಲ. ಪಂಚಾಯಿತಿಗೆ ದೂರನ್ನು ಸಲ್ಲಿಸಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಆಸ್ತಿಯು ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು

ನುಡಿಯುತ್ತಾರೆ. ನಮ್ಮ ಊರಿನಲ್ಲಿ ಕೋಲ್ಹಾರ ಪಟ್ಟಣ ಪಂಚಾಯಿತಿ ಎಂದರೆ ಸರಿ. ನಮ್ಮ ದಾಖಲಾತಿಗಳು ಪಟ್ಟಣ ಪಂಚಾಯಿತಿಯಲ್ಲಿ ಸಿಗುತ್ತವೆ ಎಂದರೆ ಸರಿ. UKP ಗೆ ನನ್ನ ಜಾಗ ಅತೀಕ್ರಮಣವಾಗಿರುತ್ತದೆ ಎಂದು ದೂರನ್ನು ಸಲ್ಲಿಸಿರುವುದಿಲ್ಲ. ದಾವೆ ಸಲ್ಲಿಸುವ ಮುಂಚೆ ಅಳತೆ ಮಾಡಿಸಿರುವುದಿಲ್ಲ, ದಾವಾ ನೀಡುವ ಸಮಯದಲ್ಲಿ ಅಳತೆ ಮಾಡಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸನ್ 2006 ರಲ್ಲಿ ಅಳತೆ ಮಾಡಿಸಲಾಗಿರುತ್ತದೆ.

13. ನಿಪಿ-4 ಕಟ್ಟಡ ಪಕ್ಕದಲ್ಲಿ ಶೆಡ್ಡು ನನ್ನದಾಗಿರುತ್ತದೆ ಎಂದರೆ ಸರಿ. ಶೆಡ್ಡು ಪಕ್ಕದಲ್ಲಿ ಇರುವ ಪೂರ್ವ ಭಾಗದಲ್ಲಿ ಇರುವ ಜಾಗದ ಪೋಟೋವನ್ನು ನೀಡಿದ ಬಗ್ಗೆ ನನಗೆ ನೆನಪಿಲ್ಲ. JIHG ರಾಚೋಟಿ ದೇವಸ್ಥಾನ ಜಾಗ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ದೇವಸ್ಥಾನ ಇರುವುದು ಗೊತ್ತಾಗುತ್ತದೆ ಎಂದು ಪೋಟೋ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ರಾಚೋಟಿ ದೇವಸ್ಥಾನ ಜಾಗಕ್ಕೆ ತಂತಿ ಬೇಲಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಈಗ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ತಂತಿ ಬೇಲಿ ಹಾಕಿ ಎಷ್ಟು ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಅಂದಾಜು 1-2 ವರ್ಷ ಆಗಿರುತ್ತವೆ ಎಂದು ನುಡಿಯುತ್ತಾರೆ. ನಿಡಿ-1 ನಾನು ಹಾಜರುಪಡಿಸಿದ O.S.No. 334/2001 ರ ತೀರ್ಪು ಮತ್ತು ಡಿಕ್ರಿಯನ್ನು ಮಾತ್ರ ಹಾಜರುಪಡಿಸಿದ್ದು ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ರಾಚೋಟಿ ದೇವಸ್ಥಾನ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

14. O.S.No.334/2001 ರ ಬಾಂಬೆ ನ್ಯಾಸಗಳ ಅಧಿನಿಯಮಗಳ 1983 ರ ಅಡಿಯಲ್ಲಿ ರಾಚೋಟಿ ದೇವಸ್ಥಾನ ಎಂದು ನೋಂದಣಿ ಆಗಿರುತ್ತದೆ ಎಂದರೆ ಸರಿ. ರಾಚೋಟಿ ದೇವಸ್ಥಾನ ಮುಳಗಡೆ ಆದ ಕಾರಣ ಡಿ-76 ಎಂದು ನನ್ನ ಆಸ್ತಿಯ ಪೂರ್ವ ದಿಕ್ಕಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ರಾಚೋಟೇಶ್ವರ ರುದ್ರ ಪಶುಪತಿ ಮಠಕ್ಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಜಾಗದ ಪೂರ್ವ ದಿಕ್ಕಿನ 4 ಗುಂಟೆ ಜಾಗವನ್ನು ರುದ್ರ ಪಶುಪತಿ ಮಠದ ಚಕ್ಕಬಂದಿ

ಹಾಕಿಕೊಟ್ಟಿರುವುದಿಲ್ಲ ಎಂದರೆ ಸರಿ. ನನ್ನ ಆಸಿರ್ಯ ಪೂರ್ವ ದಿಕ್ಕಿಗೆ ಉಳಿದ ಜಾಗ ಎಂದು ನಮೂದಿಸಿ ಕೊಟ್ಟಿರುತ್ತಾರೆ. ನಿಪಿ-6 ರು ದಾವಾ ಸಲ್ಲಿಸುವ ಮುಂಚೆ ತಗೆದ ಫೋಟೋವಾಗಿರುತ್ತದೆ. ಪುನರವಸತಿ ಕೇಂದ್ರಕ್ಕೆ ಅಳತೆ ಮಾಡಲು ಅರ್ಜಿ ಕೊಟ್ಟರೆ ನನ್ನ ಜಾಗ ಹೆಚ್ಚುವರಿ ಎಂದು ಗೊತ್ತಾಗುತ್ತದೆ ಎಂಬ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿ ನೀಡಿದರೆ ನನಗೆ ಯಾವ ಉದ್ದೇಶಕ್ಕಾಗಿ ನೀಡಲಾಗಿರುತ್ತದೆ ಅದು ಉಲ್ಲಂಘನೆ ಆಗುತ್ತದೆ ಎಂದು ಗೊತ್ತಾಗಿರುತ್ತದೆ ಎಂದು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ನಮೂದಿಸಿ ಕರಾರು ಉಲ್ಲಂಘನೆಯಾಗುತ್ತದೆ ಎಂದರೆ ಸರಿಯಲ್ಲ. ಆ ಕಾರಣ ನಾನು ಆಸ್ತಿಯ ಮಾಲಿಕನು ಅಲ್ಲ ಎಂದರೆ ಸರಿಯಲ್ಲ. ನನ್ನ ಆಸ್ತಿಯ ಪೂರ್ವ ದಿಕ್ಕಿಗೆ ಪ್ರತಿವಾದಿಯ ಆಸ್ತಿಯ ಬರುವುದಿಲ್ಲ, ರುದ್ರ ಪಶುಪತಿ ಆಸ್ತಿ ಬರುತ್ತದೆ ಎಂದು ದಾಖಲಾತಿ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ರುದ್ರ ಪಶುಪತಿ ಮಠ ಆಸ್ತಿ ಬರುತ್ತದೆ ಎಂದು ದಾಖಲಾತಿ ಹಾಜರುಪಡಿಸಿರುತ್ತೇನೆ.

15. ರುದ್ರ ಪಶುಪತಿ ಮಠ ಆಸ್ತಿ ಎಂದು ಯಾವ ನೋಂದಣಿ ಆಗಿರುತ್ತದೆ ಎಂದರೆ ಯಾವಾಗ ಆಗಿರುತ್ತದೆ ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ರಾಜೇಖರ ಶಿಲವಂತ ಸೇರಿ ರುದ್ರ ಪಶುಪತಿ ಮಠ ಎಂದು ನೋಂದಣಿ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಸನ್ 2017 ರಲ್ಲಿ ಸಂಘ ನೋಂದಣಿಯಾಗಿರುತ್ತದೆ ಎಂದರೆ ಸರಿ. ಸಂಘ ನೋಂದಣಿ ದಾಖಲಾತಿ ನನ್ನ ಬಳಿ ಇರುತ್ತದೆ ಎಂದರೆ ಸಾಕ್ಷಿಯು ಇದ್ದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನೋಂದಣಿ ಪತ್ರದಲ್ಲಿ ಡಿ-76 ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿಯು ಡಿ-76 ವರ್ಗಾವಣೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಆಸ್ತಿಯ ಪೂರ್ವ ಭಾಗಗಕ್ಕೆ ಆಸ್ತಿ ನಂ.1675 ಆಗಿರುತ್ತದೆ. ಆಸ್ತಿ ನಂ.1675 ಮುಳಗಡೆಯಾದ ಆಸ್ತಿ ನಂಬರ ಆಗಿರುತ್ತದೆ ಎಂದರೆ ಸಾಕ್ಷಿಯು ಅದೇ ನಂಬರನು ನೀಡಲಾಗುತ್ತದೆ ಎಂದು ನುಡಿಯುತ್ತಾರೆ. ಆಸ್ತಿ ನಂ.1675 ರಾಚೋಟೇಶ್ವರ ವೀಲರಭದ್ರೇಶ್ವರ ಕಮೀಟಿ ಹೆಸರಿನಲ್ಲಿ

ಇರುತ್ತದೆ. ಆಸ್ತಿ ನಂ.1672 ರುದ್ರ ಪಶುಪತಿ ಮಠ ( ರಾಚೋಟೇಶ್ವರ ದೇವಸ್ಥಾನ) ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ಒಂದು ದಾಖಲಾತಿಯನ್ನು ತೋರಿಸಿದ್ದು ರಾಚೋಟೇಶ್ವರ ದೇವಸ್ಥಾನ ಇರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸರ್ವೆ ಮಾಡುವಾಗ ತಪ್ಪಾಗಿ ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. O.S.No. 334/2001 ರಲ್ಲಿ ನಿಡಿ-2 ಅವಾರ್ಡ ಪ್ರತಿ ಆಗಿರುತ್ತದೆ ಎಂದರೆ ಸರಿ. ನಿಡಿ-9 ರ ತದ್ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. ಸಾಕ್ಷಿ ಒಂದು ದಾಖಲಾತಿಯನ್ನು ತೋರಿಸಿದ್ದು VPC No.1675 ವೀರಭದ್ರೇಶ್ವರ ದೇವಸ್ಥಾನ ಎಂದು ನಮೂದಿಸಲಾಗಿದೆ ಎಂದರೆ ಸರಿ. ವೀರಭದ್ರೇಶ್ವರ ದೇವಸ್ಥಾನದ ಕಮೀಟಿಯವರು ರುದ್ರ ಪಶುಪತಿ ಕಮೀಟಿಯವರ ವಿರುದ್ಧ MAG No.122/2022 ಪ್ರಕರಣ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**